# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 517 ವೆಚ್ಚ 6/2021 ಇ

ಕರ್ನಾಟಕ ಸರ್ಕಾರದ ಸಚಿವಾಲಯ,

ವಿಧಾನ ಸೌಧ,

ಬೆಂಗಳೂರು, ದಿನಾಂಕ:4.11.2021

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು

ಆರ್ಥಿಕ ಇಲಾಖೆ, ವಿಧಾನಸೌಧ,

ಬೆಂಗಳೂರು

ರವರಿಗೆ:

ಖಜಾನೆ ಆಯುಕ್ತರು,

ಖಜಾನೆ ಆಯುಕ್ತಾಲಯ, 5 & 6 ನೇ ಮಹಡಿ,

ಕೆಪಿಸಿಎಲ್ ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-560001

ಮಾನ್ಯರೆ,

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಿಂದ ಬಾಕಿ ವೇತನ ಸೆಳೆಯಲು ಸಹಮತಿ ಕೋರಿರುವ ಬಗ್ಗೆ

ಉಲ್ಲೇಖ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾಗಿರುವ ಪತ್ರಗಳು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ವಿವಿದ ಕಾರಣಗಳಿಂದ ಅಂದರೆ ರಜೆ ಮಂಜೂರಾತಿ, ವೇತನ ಬಡ್ತಿ, ನಿವೃತ್ತ ಮತ್ತು ಪೌತಿಯಾಗಿರುವ ಸಿಬ್ಬಂದಿಯವರ ಅವಲಂಬಿತರಿಗೆ ಬಾಕಿ ವೇತನವನ್ನು ಪಾವತಿಸಬೇಕಾಗಿರುವುದರಿಂದ ಲಭ್ಯವಿರುವ ಅನುದಾನದಿಂದ ಸೆಳೆಯಲು ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಪಿ 2021 ದಿನಾಂಕ:3.8.2021ರಲ್ಲಿನ ಷರತ್ತನ್ನು ಸಡಿಲಗೊಳಿಸಿ ಬಾಕಿ ವೇತನವನ್ನು ಸೆಳೆಯಲು ಅವಕಾಶ ನೀಡುವಂತೆ ಸಂಬಂಧಿಸಿದ ಖಜಾನಾದಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಪತ್ರಗಳನ್ನು ಬರೆದಿದ್ದು ಸದರಿ ಪತ್ರಗಳನ್ನು ಡೌನ್ ಲೋಡ್ ಮಾಡಿ ವ್ಯವಹಾರ ಪುಟದಲ್ಲಿರಿಸಲಾಗಿದೆ. ವಿವರ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ | ಜಿಲ್ಲಾ/ತಾಲ್ಲೂಕು ಪಂಚಾಯತಿ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ನೀಡಿರುವ ಸಮಜಾಯಿಷಿ |
|---|---|---|---|
| 1 | ಉಡುಪಿ | 2515-00-101-0-28-005 | ತೆರವಾಗಿದ್ದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಹುದ್ದೆ ಭರ್ತಿಯಾದ್ದರಿಂದ ಬಾಕಿ ವೇತನ ಸೆಳೆಯಲು |
| 2 | ಕನಕಗಿರಿ | 2515-00-102-0-61-005 | ಕರೆಗುಡ್ಡದ ರಾಜಶೇಖರ, ಯೋಜನಾಧಿಕಾರಿ ಇವರ ಬಾಕಿ ವೇತನ ಸೆಳೆಯಲು |
| 3 | ಕುಣಿಗಲ್ | 2515-00-102-0-61-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 4 | ಚಾಮರಾಜನಗರ | 2202-00-102-0-62-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 5 | ಹಗರಿಬೊಮ್ಮನಹಳ್ಳಿ | 2515-00-102-0-61-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ |

| | | | |
|---|---|---|---|
| | | | ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 6 | ದಾವಣಗೆರೆ | 2059-80-196-1-01-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 7 | ವಿಜಯಪುರ | 2235-02-101-0-27-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 8 | ಮೈಸೂರು | 2515-00-101-0-28-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |
| 9 | ಹೊಳೆನರಸೀಪುರ | 2202-00-101-0-61-005 | ಅಧಿಕಾರಿ/ಸಿಬ್ಬಂದಿಯವರ ಬಾಕಿ ವೇತನವನ್ನು ಲಭ್ಯ ವಿರುವ ಅನುದಾನದಿಂದ ಸೆಳೆಯಲು |

ಪ್ರಸ್ತಾವನೆಯು ಬಾಕಿ ವೇತನವನ್ನು ಲಭ್ಯವಿರುವ ಅನುದಾನದಿಂದ ಭರಿಸಲು ಹಾಗೂ ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರದಿರುವ ಷರತ್ತನ್ನು ವಿಧಿಸಿ ಬಾಕಿ ವೇತನವನ್ನು ಸೆಳೆಯಲು ಸುತ್ತೋಲೆಯ ಷರತ್ತನ್ನು ಸಡಿಲಿಸಿ ಸಹಮತಿಸಿದೆ. ಅದರಂತೆ ಬಾಕಿ ವೇತನ ಸೆಳೆಯಲು ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವಂತೆ ಸಂಬಂಧಪಟ್ಟವರಿ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

ತಮ್ಮ ನಂಬುಗೆಯ,

(ಶ್ರೀಕೃಷ್ಣ ಎನ್.ಬುಗಟ್ಯಾಗೋಳ)
ವಿಶೇಷಾಧಿಕಾರಿ(ಜಿಪಂ) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಪ್ರತಿ:

1. ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು
2. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳಿಗೆ ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ